ಪ್ರಸಿದ್ಧ ಕವಿ ಎಂ. ಗೋಪಾಲಕೃಷ್ಣ ಅಡಿಗರ 'ಭೂಮಿಗೀತೆ' ಕವನವನ್ನು ಕಾವ್ಯಾಸಕ್ತರು ಓದಿಯೇ ಇರುತ್ತಾರೆ. ಅದರ ಕೊನೆಯ ಎರಡು ಸಾಲುಗಳಂತೂ ಮತ್ತೆ ಮತ್ತೆ ಮನವನ್ನು ಕಾಡುತ್ತಲೇ ಇರುತ್ತವೆ.

ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ;
ದಾರಿ ಸಾಗುವುದೆಂತೋ ನೋಡಬೇಕು.

ಅಡಿಗರ ಕಾವ್ಯಾರ್ಥ, ಅನಿಶ್ಚಿತ ಭವಿಷ್ಯವನ್ನು ಕುರಿತಾದುದು. ಮುಂದಿನ ದಾರಿಯ ಬಗ್ಗೆ ಗೊಂದಲ. ಅದನ್ನು ನಿರೂಪಿಸುವುದಕ್ಕೆ ಇದಕ್ಕಿಂತ ಶಕ್ತವಾದ ಬೇರೆ ರೂಪಕ ಇರಲಾರದು. ಇನ್ನೊಬ್ಬನ ಭುಜದ ಮೇಲೆ ಕೂತು ನೋಡುವ ನೋಟ ವಿಜ್ಞಾನ ಸಂದರ್ಭದಲ್ಲಿ ಆಗಾಗ ಮುನ್ನೆಲೆಗೆ ಬರುತ್ತಲೇ ಇರುತ್ತದೆ. ಅದು ಸೂಚಿಸುವುದು ಏನನ್ನು? ನಮ್ಮ ಹಿಂದಿನವರ ಬೌದ್ಧಿಕ ಕೌಶಲಗಳ—ಚಿಂತನೆಗಳ ಆಧಾರದ ಮೇಲೆ ಮುಂದಿನ ಚಿಂತನೆಗಳು ಬೆಳೆಯುತ್ತವೆ ಎಂಬ ವಿನೀತ ಭಾವ. 'ನಾನೇ ಎಲ್ಲ' ಎನ್ನುವುದನ್ನು ನವಿರಾಗಿ ಆಚೆ ತಳ್ಳಿ ಹಿಂದಿನವರ ಸಾಧನೆಗಳನ್ನು ಕೃತಜ್ಞತೆಯಿಂದ ಸ್ಮರಿಸುವುದು. ಇಂಥ ಒಂದು ಸಂದರ್ಭ ನ್ಯೂಟನ್ನನ ವಿಚಾರದಲ್ಲಿ ಹೆಚ್ಚು ಪ್ರಚಲಿತವಿದೆ.

ನ್ಯೂಟನ್ ಮತ್ತು ಅವನ ಸಮಕಾಲೀನ ವಿಜ್ಞಾನಿ ರಾಬರ್ಟ್ ಹುಕ್ (ಸಸ್ಯಗಳಲ್ಲಿನ ಜೀವಕೋಶಗಳನ್ನು ಆ ಹೆಸರಿನಿಂದ ಕರೆದಾತ) ಇಬ್ಬರೂ ಪರಸ್ಪರ ಗೌರವ ಇಟ್ಟುಕೊಂಡವರು. ಆದರೆ ಮುಂದೆ ಸ್ನೇಹ ಹದಗೆಟ್ಟು ಒಂದು ಸಂದರ್ಭದಲ್ಲಿ ನ್ಯೂಟನ್ ವ್ಯಂಗ್ಯವಾಗಿ 'ನಾನೇನಾದರೂ ದೂರ ನೋಡಿದ್ದರೆ, ಅದು ನಿಮ್ಮಂಥ ದೈತ್ಯ ಪ್ರತಿಭೆಯ ಹೆಗಲ ಮೇಲೆ ಕುಳಿತು' ಎಂದು ಬರೆದಿದ್ದುಂಟು. ಇಲ್ಲಿ ನೀನೇನೂ ಅಂಥ ಪ್ರತಿಭಾವಂತನಲ್ಲ ಎಂಬ ವ್ಯಂಗ್ಯವಿದೆ ಎನ್ನುವವರೂ ಉಂಟು. ಅನಂತರ ಇದು ನುಡಿಗಟ್ಟೇ ಆಯಿತು; ಬಳಕೆಯಾಗುತ್ತಲೇ ಹೋಯಿತು. ಎಲ್ಲಿಯವರೆಗೆ ಎಂದರೆ, ಬ್ರಿಟನ್ನಿನ ಎರಡು ಪೌಂಡ್ ನಾಣ್ಯದ ಅಂಚಿನಲ್ಲಿ 'ಸ್ಟ್ಯಾಂಡಿಂಗ್ ಆನ್ ದಿ ಷೋಲ್ಡರ್ಸ್ ಆಫ್ ಜೈಂಟ್ಸ್' ಎಂಬ ವಾಕ್ಯವನ್ನು ಟಂಕಿಸಲಾಗಿದೆ. ಕೊಪರ್ನಿಕಸ್, ಗೆಲಿಲಿಯೋ, ಕೆಪ್ಲರ್, ನ್ಯೂಟನ್ ಮತ್ತು ಐನ್‌ಸ್ಟೈನ್ ಅವರ ವೈಜ್ಞಾನಿಕ ಕೊಡುಗೆಗಳನ್ನು ಸ್ಮರಿಸಿ ಪ್ರಸಿದ್ಧ ಜೀವವಿಜ್ಞಾನಿ ಸ್ಟೀಫನ್ ಹಾಕಿಂಗ್ ಹೊರತಂದ ಕೃತಿಯ ಶೀರ್ಷಿಕೆ 'ಆನ್ ದಿ ಷೋಲ್ಡರ್ಸ್ ಆಫ್ ಜೈಂಟ್ಸ್'. 1979ರಲ್ಲಿ ಬಿ.ಬಿ.ಸಿ. ಹೊರತಂದ ಟೆಲಿಫಿಲ್ಮ್ ಹೆಸರು ಕೂಡ ಇದೇ ಆಗಿತ್ತು.

## ದೈತ್ಯಪ್ರತಿಭೆಗಳ ಹೆಗಲ ಮೇಲೆ

ಈ ನುಡಿಗಟ್ಟು ಮೊದಲು ಬಳಕೆಯಾದದ್ದು ಎಲ್ಲಿ? ಈ ಮಾತು ನ್ಯೂಟನ್ ಅವರದಂತೂ ಅಲ್ಲ. ಇದು ಪ್ಯಾರಿಸ್‌ಗೆ ನೈಋತ್ಯದಲ್ಲಿ 90 ಕಿಲೋ ಮೀಟರ್ ದೂರದಲ್ಲಿರುವ ಚಾರ್ಟೆನ್ ಎಂಬಲ್ಲಿ, 1124ಕ್ಕೂ ಮುಂಚೆ ಜೀವಿಸಿದ್ದ ಬರ್ನಾಡ್ ಎಂಬ ತತ್ತ್ವಶಾಸ್ತ್ರಜ್ಞನ ಮಾತು. ಆತ 'ನವ ಪ್ಲೇಟೊ ಸಿದ್ಧಾಂತ'ದಲ್ಲಿ ನಂಬುಗೆ ಇಟ್ಟವನು. ಒಂದು ಸಂದರ್ಭದಲ್ಲಿ 'ಆಧುನಿಕರು ಕುಬ್ಜರಿದ್ದ ಹಾಗೆ. ಹಿಂದಿನ ಬುದ್ಧಿವಂತರ ಭುಜದ ಮೇಲೆ ನಿಂತು ಬಹು ದೂರ ನೋಡಬಲ್ಲರು' ಎಂದು ಹೇಳಿದ್ದ. ಈ ಹೇಳಿಕೆಯನ್ನು ಇಂಗ್ಲೆಂಡ್‌ನ ಸ್ಯಾಲಿಸ್‌ಬರಿಯ ಜಾನ್ ದಾಖಲಿಸಿದ್ದರಿಂದ ಆ ಹೇಳಿಕೆಗೆ ಜೀವ ಬಂತು.

ಹಾಗೆ ನೋಡಿದರೆ ಈ ಪರಿಕಲ್ಪನೆ ಬರ್ನಾಡ್‌ದೂ ಅಲ್ಲ. ಗ್ರೀಕ್ ಪುರಾಣದಲ್ಲಿ ಇದರ ಬೇರುಗಳಿವೆ. ಮಹಾಕವಿ ಹೋಮರ್ ಬರೆದ 'ಒಡಿಸ್ಸಿ' ಮತ್ತು 'ಈಲಿಯಡ್' ಎಂಬ ಎರಡು ಮಹಾಕಾವ್ಯದಲ್ಲೂ ಓರಿಯನ್ (ಮಹಾವ್ಯಾಧ) ಬಗ್ಗೆ ಅನೇಕ ಪ್ರಸಂಗಗಳು ಬರುತ್ತವೆ. ಓರಿಯನ್, ಪಾತಾಳದೇವತೆ ನೆಪ್ಚ್ಯೂನ್‌ನ ಮಗ. ಮಗನಿಗೆ ಹೆಚ್ಚು ಸ್ವಾತಂತ್ರ್ಯ ಕೊಟ್ಟ. ಆದರೆ ಓರಿಯನ್ ಸ್ವೇಚ್ಛಾ ಪ್ರವೃತ್ತಿಯವನು. ಈನೋಪಿಯನ್ ಎಂಬ ರಾಜನ ಮಗಳು ಇವನನ್ನು ಆಕರ್ಷಿಸಿದಳು. ಅವಳನ್ನು ಪಡೆಯಲು ಮುನ್ನುಗ್ಗಿದ. ಆಗ ಅವನು ಮದ್ಯದ ಅಮಲಿನಲ್ಲಿದ್ದ. ನೆಪ್ಚ್ಯೂನ್‌ಗೆ ತನ್ನ ಮಗನ ಪುಂಡಾಟವನ್ನು ತಡೆಯಲಾಗದೆ ಅವನ ಎರಡೂ ಕಣ್ಣುಗಳನ್ನು ಕಿತ್ತುಬಿಟ್ಟ. ಓರಿಯನ್ ಅಂಧನಾದ. ಆದರೆ ಪಾತಾಳದಲ್ಲಿ ಸೈಕ್ಲೋಪ್ ಎಂಬ ಒಕ್ಕಣ್ಣ ರಾಕ್ಷಸ ಸುತ್ತಿಗೆಯಿಂದ ಬಡಿದು ಶಬ್ದಮಾಡುತ್ತಿದ್ದ. ಆ ಶಬ್ದ ಬಂದ ಕಡೆ ಅಂಧನಾದ ಓರಿಯನ್ ನಡೆಯತೊಡಗಿದ. ಅವನ ಅವಸ್ಥೆಯನ್ನು ಕಂಡು

**ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಬಳಕೆಯಾದ ಕೆಲವು ನುಡಿಗಟ್ಟುಗಳು ಜನಬಳಕೆಯಲ್ಲಿ ಬೇರೆಯದೇ ಅರ್ಥ ಪಡೆದುಕೊಳ್ಳುತ್ತವೆ; ಮೂಲ ಅರ್ಥಕ್ಕೂ ಈಗ ಬಳಕೆಯಾಗುತ್ತಿರುವ ಅರ್ಥಕ್ಕೂ ಸಂಬಂಧವೇ ಇಲ್ಲದಂತೆ ಹೊಸ ರೂಪ ಹೊಂದುತ್ತವೆ. ನುಡಿಗಟ್ಟುಗಳ ಮೂಲ ಹುಡುಕಿಕೊಂಡು ಹೋದರೆ ಸ್ವಾರಸ್ಯಕರ ಸಂಗತಿಗಳು ಎದುರಾಗುತ್ತವೆ.**

